ದಸರ ಉತ್ಸವಕ್ಕೆ ಸರ್ಕಾರ ಹಾಕಿಕೊಂಡಿರುವ ವಿಶೇಷ ಕಾರ್ಯಕ್ರಮಗಳು

೯೭೬ (೧೫೨೨) ಶ್ರೀ ಹರ್ಷಕುಮಾರ ಗೌಡ, (ಚಾಮರಾಜ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮೈಸೂರು ನಗರ ದಸರ ವಸ್ತು ಪ್ರದರ್ಶನದ ಪ್ರವೇಶ ದ್ವಾರದ ನಿರ್ಮಾಣ ಕಾರ್ಯವು ಮುಗಿಯುವುದು ಯಾವಾಗ ?

ಆ) ಈ ಸಾರಿಯ ದಸರ ಉತ್ಸವಕ್ಕೆ ಸರ್ಕಾರವು ಅಧಿಕ ಹಣ ಬಿಡುಗಡೆ ಮಾಡುತ್ತಿದೆಯೇ ?

ಇ) ಅಧಿಕ ಹಣ ಬಿಡುಗಡೆ ಮಾಡುವುದಿದ್ದರೆ, ಬಿಡುಗಡೆ ಮಾಡುವ ಹಣದ ಪ್ರಮಾಣವೆಷ್ಟು ?

ಈ) ಈ ಸಾರಿಯ ದಸರ ಮಹೋತ್ಸವಕ್ಕೆ ಸರ್ಕಾರ ಹಾಕಿಕೊಂಡಿರುವ ವಿಶೇಷ ಕಾರ್ಯಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ, (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಮೈಸೂರು ದಸರ ವಸ್ತು ಪ್ರದರ್ಶನದ ಪ್ರವೇಶದ್ವಾರದ ಕೆಲಸದಲ್ಲಿ ಸುಮಾರು ೭೫% ಕೆಲಸವು ಮುಗಿದಿದ್ದು ಉಳಿದ ಕೆಲಸವು ಈ ವರ್ಷದ ದಸರಾ ವಸ್ತುಪ್ರದರ್ಶನ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಮುಗಿಯುವ ನಿರೀಕ್ಷೆಯಿದೆ.

ಆ) ಅವಶ್ಯಕತೆಗೆ ತಕ್ಕಂತೆ ಹಣ ಬಿಡುಗಡೆ ಮಾಡಲಾಗುವುದು.

ಇ) ೧೯೯೦ರ ಮಹೋತ್ಸವಕ್ಕೆ ರೂ. ೨೯.೭೯ ಲಕ್ಷಗಳನ್ನು ಸರ್ಕಾರದ ಅನುದಾನದಲ್ಲಿ ದಸರ ಮಹೋತ್ಸವಕ್ಕೆ ನಿಗದಿ ಪಡಿಸಲಾಗಿದೆ. ಇದು ಹಿಂದಿನ ವರ್ಷಕ್ಕಿಂತ ಸುಮಾರು ೩.೭೯ ಲಕ್ಷ ರೂ. ಹೆಚ್ಚು ಆಗುವುದು.

ಈ) ದಸರ ಮಹೋತ್ಸವದ ಆಚರಣೆಯ ಸಲುವಾಗಿ ಉತ್ಸವ ಮಟ್ಟದ ಸಮಿತಿ ಹಾಗೂ ಕಾರ್ಯನಿರ್ವಾಹಕ ಸಮಿತಿಗಳನ್ನು ರಚಿಸಿದ್ದು ಕಾರ್ಯಕ್ರಮಗಳನ್ನು ಸಮಿತಿಗಳಲ್ಲಿ ಪರಿಶೀಲಿಸಿ, ಮಹೋತ್ಸವವನ್ನು ವಿಶೇಷವಾಗಿ ಆಚರಿಸಲು ಏರ್ಪಾಡು ಮಾಡಲಾಗುವುದು.

ಬೆಂಗಳೂರು ನಗರ ಸಾರಿಗೆ ಸ್ಟೇಜ್‌ಗಳ ಪುನರ್ ರಚನೆ

೯೭೭ (೧೫೩೬) ಶ್ರೀ ಎಂ. ನಾರಾಯಣಸ್ವಾಮಿ, (ಬೇಗಮಂಗಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ನಗರದಲ್ಲಿ ಬಿಟಿಎಸ್ ಸ್ಟೇಜ್‌ಗಳನ್ನು ಯಾವಾಗ ರಚಿಸಲಾಯಿತು ?

ಆ) ಈ ಸ್ಟೇಜ್‌ಗಳನ್ನು ಯಾವ ಆಧಾರದ ಮೇಲೆ ಹಾಗೂ ಎಷ್ಟು ನಿಲುಗಡೆಗೆ ಒಂದು ಸ್ಟೇಜ್ ಎಂದು ರಚಿಸಲಾಗಿದೆ ?

ಇ) ಶಿವಾಜಿನಗರದಿಂದ ರಾಜಾಜಿನಗರದ ರಾಮಮಂದಿರದವರೆಗೆ ಹಾಗೂ ಬೆಂಗಳೂರು ಬಸ್ ನಿಲ್ದಾಣದಿಂದ ಹರಿಶ್ಚಂದ್ರ ಘಾಟ್‌ವರೆಗೆ ಎಷ್ಟು ಸ್ಟೇಟ್‌ಗಳಿವೆ ? (ಯಾವ ನಿಲುಗಡೆ ಸ್ಟೇಜ್ ಎಂಬುದರ ಬಗ್ಗೆ ವಿವರ ನೀಡುವುದು).

ಈ) ಈ ಸ್ಟೇಜ್‌ಗಳನ್ನು ಪುನರ್ ರಚಿಸುವ ವಿಷಯ ಸರ್ಕಾರದ ಮುಂದಿದೆಯೇ ? ಹಾಗಿದ್ದಲ್ಲಿ ಯಾವಾಗ ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಬೆಂಗಳೂರು ನಗರ ಸಾರಿಗೆ ವಿಭಾಗವು ದರ ಹಂತಗಳ ಪದ್ಧತಿಯನ್ನು ಬೆಂಗಳೂರು ಸಾರಿಗೆ ಕಂಪನಿಯು ಅನುಸರಿಸುತ್ತಿದ್ದ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದೆ. ಆದರೆ ಈ ಪದ್ಧತಿಯನ್ನು ಒಂದು ಹಂತಕ್ಕೆ ೨ ಕಿ.ಮೀ.ಗೆ ಪರಿಷ್ಕರಿಸಲಾಗಿದೆ.